No.

## ಮಂಗಳೂರು ವಿಶ್ವವಿದ್ಯಾನಿಲಯ

# ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು

# ವಿದ್ಯಾರ್ಥಿ ಸಂಘದ ಚುನಾವಣೆಯ
# ನೀತಿ ಹಾಗೂ ನಿಯಮಾವಳಿ

## 2021–22

# ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು

(ಮಂಗಳೂರು ವಿಶ್ವವಿದ್ಯಾನಿಲಯದ ಘಟಕ ಕಾಲೇಜು)

## ವಿದ್ಯಾರ್ಥಿ ಸಂಘದ ಚುನಾವಣೆ 2021-22

ವಿಷಯ : **ವಿಶ್ವವಿದ್ಯಾನಿಲಯ ಕಾಲೇಜು ಮಂಗಳೂರು ಇದರ ವಿದ್ಯಾರ್ಥಿ ಸಂಘದ ಪದಾಧಿಕಾರಿಗಳನ್ನು ಪರೋಕ್ಷ ಚುನಾವಣೆಯ ಮೂಲಕ ಆಯ್ಕೆ ಮಾಡುವುದು.**

### ವಿದ್ಯಾರ್ಥಿ ಸಂಘದ ಚುನಾವಣೆಯ ರೀತಿ - ನೀತಿಗಳು ಹಾಗೂ ಸಂಬಂಧಿಸಿದ ನಿಯಮಾವಳಿಗಳು

**ಈ ಕೆಳಕಂಡ ಪ್ರತಿನಿಧಿಗಳ ಸ್ಥಾನಗಳಿಗೆ ಚುನಾವಣೆ ನಡೆಯುತ್ತದೆ.**

**1. ಪ್ರತಿಯೊಂದು ಪದವಿ ತರಗತಿಯ ಪ್ರತಿ ವಿಭಾಗಕ್ಕೆ ಒಬ್ಬ ಪ್ರತಿನಿಧಿ**

| | |
|---|---|
| ಪ್ರಥಮ ಬಿ.ಎ. 'ಎ', 'ಬಿ' ಮತ್ತು 'ಸಿ'ಯಿಂದ | ... ... 3 ಪ್ರತಿನಿಧಿಗಳು |
| ದ್ವಿತೀಯ ಬಿ.ಎ. 'ಎ' 'ಬಿ' ಮತ್ತು 'ಸಿ'ಯಿಂದ | ... ... 3 ಪ್ರತಿನಿಧಿಗಳು |
| ಅಂತಿಮ ಬಿ.ಎ. 'ಎ', 'ಬಿ' ಮತ್ತು 'ಸಿ'ಯಿಂದ | ... ... 3 ಪ್ರತಿನಿಧಿಗಳು |
| ಪ್ರಥಮ ಬಿ.ಕಾಂ. 'ಎ', 'ಬಿ', 'ಸಿ' ಮತ್ತು 'ಡಿ'ಯಿಂದ | ... ... 4 ಪ್ರತಿನಿಧಿಗಳು |
| ದ್ವಿತೀಯ ಬಿ.ಕಾಂ. 'ಎ', 'ಬಿ', 'ಸಿ' ಮತ್ತು 'ಡಿ'ಯಿಂದ | ... ... 4 ಪ್ರತಿನಿಧಿಗಳು |
| ತೃತೀಯ ಬಿ.ಕಾಂ. 'ಎ','ಬಿ' ಮತ್ತು'ಸಿ'ಯಿಂದ | ... ... 3 ಪ್ರತಿನಿಧಿಗಳು |
| ಪ್ರಥಮ ಬಿ.ಬಿ.ಎ | ... ... 1 ಪ್ರತಿನಿಧಿ |
| ಪ್ರಥಮ ಬಿ.ಎಸ್ಸಿ. 'ಎ' ಮತ್ತು 'ಬಿ' ಯಿಂದ | ... ... 2 ಪ್ರತಿನಿಧಿಗಳು |
| ದ್ವಿತೀಯ ಬಿ.ಎಸ್ಸಿ. 'ಎ' ಮತ್ತು 'ಬಿ' ಯಿಂದ | ... ... 2 ಪ್ರತಿನಿಧಿಗಳು |
| ತೃತೀಯ ಬಿ.ಎಸ್ಸಿ. 'ಎ' ಮತ್ತು 'ಬಿ' ಯಿಂದ | ... ... 2 ಪ್ರತಿನಿಧಿಗಳು |
| ಒಟ್ಟು ತರಗತಿ ಪ್ರತಿನಿಧಿಗಳು | 27 |

**2. ಮಹಿಳಾ ಪ್ರತಿನಿಧಿ**

ಅಂತಿಮ ಬಿ.ಎ., ಅಂತಿಮ ಬಿ.ಕಾಂ., ಮತ್ತು ಅಂತಿಮ ಬಿ.ಎಸ್ಸಿ.,ಯಿಂದ ತಲಾ ಒಬ್ಬರಂತೆ ಒಟ್ಟು 3 ಮಹಿಳಾ ಪ್ರತಿನಿಧಿಗಳು ಉದಾ: ಅಂತಿಮ ಬಿ.ಎ.ಯ ಒಬ್ಬ ಪ್ರತಿನಿಧಿ - ಈ ಪ್ರತಿನಿಧಿಯನ್ನು ಬಿ.ಎ. ಮೂರು ವರ್ಷದ ಎಲ್ಲಾ ವಿದ್ಯಾರ್ಥಿನಿಯರು ಆಯ್ಕೆ ಮಾಡುವರು. ಹಾಗೆಯೇ ಬಿ.ಕಾಂ., ಮತ್ತು ಬಿ.ಎಸ್ಸಿ. ವಿಭಾಗಗಳಿಂದ ತಲಾ ಒಬ್ಬರನ್ನು ಆಯಾ ಪದವಿಯ ವಿದ್ಯಾರ್ಥಿನಿಯರು ಆಯ್ಕೆ ಮಾಡುವರು.ಶೈಕ್ಷಣಿಕ ವರ್ಷದಲ್ಲಿ ಕೇವಲ (ಪ್ರಥಮ ಬಿಬಿಎ (T&T) ವಿದ್ಯಾರ್ಥಿಗಳು ಇರುವುದರಿಂದ, ಅವರು ಈ ಬಾರಿಯ ಚುನಾವಣೆಯಲ್ಲಿ ಅಂತಿಮ ಬಿಕಾಂ ಮಹಿಳಾ ಪ್ರತಿನಿಧಿಗೆ ಆಯ್ಕೆ ಮಾಡುವ ಅರ್ಹತೆಯನ್ನು ಹೊಂದಿರುತ್ತಾರೆ.

| | | |
|---|---|---|
| **ಒಟ್ಟು ಮಹಿಳಾ ಪ್ರತಿನಿಧಿಗಳು** | **... ...** | **3** |
| **ವಿದ್ಯಾರ್ಥಿ ಸಂಘದ ಒಟ್ಟು ಪ್ರತಿನಿಧಿಗಳು** | **... ...** | **27+3=30** |

**ಈ ಮೇಲಿನಂತೆ ಆರಿಸಲ್ಪಟ್ಟ ಪ್ರತಿನಿಧಿಗಳು ಈ ಕೆಳಕಂಡ ಪದಾಧಿಕಾರಿಗಳನ್ನು ಚುನಾಯಿಸುವರು.**

(ಅ) ಅಧ್ಯಕ್ಷ, (ಆ) ಕಾರ್ಯದರ್ಶಿ, (ಇ) ಸಹ ಕಾರ್ಯದರ್ಶಿ, (ಮಹಿಳೆ ಮೀಸಲು) (ಈ) ಲಲಿತ ಕಲಾ ಸಂಘಕ್ಕೆ ಕಾರ್ಯದರ್ಶಿ, (ಉ) ಮತ್ತು ಲಲಿತ ಕಲಾ ಸಂಘದ ಸಹ ಕಾರ್ಯದರ್ಶಿ. (ಮಹಿಳೆ ಮೀಸಲು)

**ಎ. ವಿದ್ಯಾರ್ಥಿ ಸಂಘ ಚುನಾವಣೆಗೆ ಸಂಬಂಧಿಸಿದ ನಿಯಮಗಳು:**

1. ಪದವಿ ತರಗತಿಗಳ ಪ್ರತಿನಿಧಿ ಸ್ಥಾನಕ್ಕೆ ಸ್ಪರ್ಧಿಸುವ ಉಮೇದುವಾರನು / ಉಮೇದುವಾರಳು ಆ ತರಗತಿಯ ಅಧಿಕೃತ ವಿದ್ಯಾರ್ಥಿ/ವಿದ್ಯಾರ್ಥಿನಿಯಾಗಿರಬೇಕು.
2. ಯಾವುದೇ ವಿದ್ಯಾರ್ಥಿ/ವಿದ್ಯಾರ್ಥಿನಿ ಒಂದಕ್ಕಿಂತ ಹೆಚ್ಚು ಸ್ಥಾನಗಳಿಗೆ ಸ್ಪರ್ಧಿಸಲು ಅವಕಾಶವಿಲ್ಲ.
3. ಮಹಿಳಾ ಪ್ರತಿನಿಧಿ ಸ್ಥಾನಕ್ಕೆ ಸ್ಪರ್ಧಿಸುವ ವಿದ್ಯಾರ್ಥಿನಿಯರು ಕಲೆ, ವಾಣಿಜ್ಯ, ವ್ಯವಹಾರ ಮತ್ತು ವಿಜ್ಞಾನ ಅಂತಿಮ ಪದವಿ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರಬೇಕು. (ಅಂತಿಮ ಬಿ.ಎ., ಅಂತಿಮ ಬಿ.ಕಾಂ., ಅಂತಿಮ ಬಿ.ಎಸ್ಸಿ.) ಮತ್ತು ಎರಡು ವರ್ಷ ಈ ಕಾಲೇಜಿನಲ್ಲಿ ಕಲಿತಿರಬೇಕು.
4. ಚುನಾವಣೆಯಲ್ಲಿ ಸ್ಪರ್ಧಿಸುವ ಎಲ್ಲಾ ಅಭ್ಯರ್ಥಿಗಳು ನಿಗದಿತ ದಿನಾಂಕಕ್ಕೆ ಮುನ್ನ ಕಾಲೇಜಿನ ಪ್ರವೇಶ ಶುಲ್ಕ ಕಟ್ಟಿರಬೇಕು.

5. ಪ್ರತಿಯೊಬ್ಬ ಸ್ಪರ್ಧಿಯ ಹೆಸರನ್ನು ಒಬ್ಬರು ಆ ತರಗತಿಯ ವಿದ್ಯಾರ್ಥಿ / ವಿದ್ಯಾರ್ಥಿನಿ ಸೂಚಿಸಬೇಕು. ಮತ್ತೊಬ್ಬರು ಅದೇ ತರಗತಿಯ ವಿದ್ಯಾರ್ಥಿ/ವಿದ್ಯಾರ್ಥಿನಿ ಅನುಮೋದಿಸಬೇಕು. ಈ ವಿದ್ಯಾರ್ಥಿ/ವಿದ್ಯಾರ್ಥಿನಿಯರು ಕಾಲೇಜಿನ ಪ್ರವೇಶ ಶುಲ್ಕ ಪಾವತಿ ಮಾಡಿರಬೇಕು.

6. ಯಾವುದೇ ವಿದ್ಯಾರ್ಥಿ/ವಿದ್ಯಾರ್ಥಿನಿ ಒಂದೇ ಸ್ಥಾನದಲ್ಲಿ ಸ್ಪರ್ಧಿಸುವ ಒಬ್ಬ ಸ್ಪರ್ಧಿಗಿಂತ ಹೆಚ್ಚಿನ ಸ್ಪರ್ಧಿಗಳ ಹೆಸರನ್ನು ಸೂಚಿಸುವುದಾಗಲೀ ಅನುಮೋದಿಸುವುದಾಗಲೀ ಮಾಡಬಾರದು.

7. ಸ್ಪರ್ಧಿಗಳು, ಅವರ ಸೂಚಕ ಮತ್ತು ಅನುಮೋದಕರು ನಾಮಪತ್ರ ಸಲ್ಲಿಸುವಾಗ ವಾರ್ಷಿಕ ಶುಲ್ಕವನ್ನು ಕಟ್ಟಿರುವ ದಾಖಲೆಯನ್ನು ಮತ್ತು ತಮ್ಮ ಗುರುತಿನ ಪತ್ರವನ್ನು ಹಾಜರು ಪಡಿಸಬೇಕು. ರಶೀದಿ ಮತ್ತು ಗುರುತಿನ ಪತ್ರದ ಜೆರಾಕ್ಸ್ ಪ್ರತಿಯನ್ನು ಅರ್ಜಿಗೆ ಲಗತ್ತಿಸಬೇಕು.

8. ಪ್ರತಿಯೊಬ್ಬ ಸ್ಪರ್ಧಿಯೂ ನಾಮಪತ್ರ ಸಲ್ಲಿಕೆಗೆ ನಿಗದಿಯಾಗಿರುವ ಶುಲ್ಕವನ್ನು ನಿಗದಿತ ಕ್ರಮದಲ್ಲಿ ಪಾವತಿಸಿ, ನಾಮಪತ್ರ ನಮೂನೆಯನ್ನು ಕಾಲೇಜಿನ ಕಛೇರಿಯಲ್ಲಿ ಪಡೆದುಕೊಳ್ಳಬೇಕು. ಬೇರೆಡೆ ಪಡೆದ ನಾಮಪತ್ರ ಅಥವಾ ಪ್ರತಿ ಮಾಡಿದ ನಾಮಪತ್ರವನ್ನು ತಿರಸ್ಕರಿಸಲಾಗುವುದು.

9. ನಿಗದಿಯಾದ ನಮೂನೆಯಲ್ಲಿ ಎಲ್ಲಾ ವಿವರಗಳನ್ನು ಸಂಪೂರ್ಣವಾಗಿ ನೀಡಿರುವ ನಾಮಪತ್ರಗಳನ್ನು ಮಾತ್ರ ಪರಿಶೀಲಿಸಲಾಗುವುದು. (ಸ್ಪರ್ಧಿಗಳು ತಮ್ಮ ಹೆಸರನ್ನು ಕಾಲೇಜಿನ ದಾಖಲೆಯಲ್ಲಿರುವಂತೆ ಬರೆಯಬೇಕು) ಹಾಗಿಲ್ಲದ ನಾಮಪತ್ರಗಳನ್ನು ತಿರಸ್ಕರಿಸಲಾಗುವುದು.

10. ಚುನಾವಣೆಯ ಪ್ರಕ್ರಿಯೆಯಲ್ಲಿ ಭಾಗವಹಿಸಬಾರದೆಂಬ ಷರತ್ತಿನ ಮೇಲೆ ಕಾಲೇಜಿಗೆ ಪ್ರವೇಶ ಪಡೆದ ವಿದ್ಯಾರ್ಥಿ/ವಿದ್ಯಾರ್ಥಿನಿ ಚುನಾವಣೆಯಲ್ಲಿ ಉಮೇದುವಾರ ಅಥವಾ ಸಹಾಯಕರಾಗಿ ಭಾಗವಹಿಸುವಂತಿಲ್ಲ. ಅಂಥವರು ತನ್ನ ಮತ ಚಲಾಯಿಸಲು ಮಾತ್ರ ಅವಕಾಶವಿದೆ.

11. ಯಾವುದೇ ಒಂದು ಸ್ಥಾನಕ್ಕೆ ಒಬ್ಬನೇ/ಒಬ್ಬಳೇ ಸ್ಪರ್ಧಿ ಇದ್ದು ಅವನ /ಅವಳ ನಾಮಪತ್ರ ಒಪ್ಪಿಗೆಯಾದಲ್ಲಿ ಆತ/ಆಕೆಯನ್ನು ಅವಿರೋಧವಾಗಿ ಆಯ್ಕೆಯಾದವನು/ ಆಯ್ಕೆಯಾದವಳು ಎಂದು ಪರಿಗಣಿಸಲಾಗುವುದು.

12. ಯಾವುದೇ ತರಗತಿ ಪ್ರತಿನಿಧಿ ಅಥವಾ ಮಹಿಳಾ ಪ್ರತಿನಿಧಿ ಸ್ಥಾನಕ್ಕೆ ಯಾವುದೇ ಉಮೇದುವಾರರು ನಾಮಪತ್ರ ಸಲ್ಲಿಸದಿದ್ದಲ್ಲಿ ಅಥವಾ ಯಾವುದೇ ತರಗತಿ ಪ್ರತಿನಿಧಿ ಅಥವಾ ಮಹಿಳಾ ಪ್ರತಿನಿಧಿ ಸ್ಥಾನಕ್ಕೆ ಸಲ್ಲಿಕೆಯಾದ ಎಲ್ಲಾ ನಾಮ ಪತ್ರಗಳು ತಿರಸ್ಕೃತವಾದಲ್ಲಿ ಆ ತರಗತಿಗೆ ಪ್ರತಿನಿಧಿ ಅಥವಾ ಮಹಿಳಾ ಪ್ರತಿನಿಧಿ ಇಲ್ಲ ಎಂದು

ತಿಳಿಯಲಾಗುವುದು.

***ಸರ್ವೋಚ್ಛ ನ್ಯಾಯಾಲಯದ ಈ ಸಂಬಂಧದ ಆದೇಶದ ಪ್ರಕಾರ**

ಎ. ಚುನಾವಣೆಯಲ್ಲಿ ಸ್ಪರ್ಧಿಸುವ ಯಾವುದೇ ಉಮೇದುವಾರ ತನ್ನ ಹಿಂದಿನ ಎಲ್ಲಾ ಸೆಮೆಸ್ಟರ್ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರತಕ್ಕದ್ದು. (ನಾಮಪತ್ರ ಸಲ್ಲಿಕೆ ಪ್ರಾರಂಭವಾಗುವ ವರೆಗಿನ ಫಲಿತಾಂಶ)

ಬಿ. ಚುನಾವಣೆಯಲ್ಲಿ ಸ್ಪರ್ಧಿಸುವ ವಿದ್ಯಾರ್ಥಿಯು ನಾಮಪತ್ರ ಸಲ್ಲಿಸುವ ದಿನಾಂಕದಂದು 17ರಿಂದ 22 ವರ್ಷ ವಯಸ್ಸಿನವರಾಗಿರಬೇಕು.

ಸಿ. ಚುನಾವಣೆಯಲ್ಲಿ ಸ್ಪರ್ಧಿಸುವ ಯಾವುದೇ ಉಮೇದುವಾರರು ತಮ್ಮ ಹಿಂದಿನ ಸೆಮೆಸ್ಟರ್ ತರಗತಿಯಲ್ಲಿ ಕನಿಷ್ಠ 75% ಹಾಜರಾತಿಯನ್ನು ಪಡೆದಿರತಕ್ಕದ್ದು.

ಹಾಜರಾತಿ ಕೊರತೆ ನಿಮಿತ್ತ ಪುನರ್ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಚುನಾವಣೆಯಲ್ಲಿ ಉಮೇದುವಾರರಾಗಿ ಸ್ಪರ್ಧಿಸುವ ಅವಕಾಶ ಇರುವುದಿಲ್ಲ.

ಡಿ. ಚುನಾವಣೆಯಲ್ಲಿ ಸ್ಪರ್ಧಿಸುವ ಯಾವುದೇ ವಿದ್ಯಾರ್ಥಿ ಈ ಹಿಂದೆ ಕ್ರಿಮಿನಲ್ ಮೊಕದ್ದಮೆಯಲ್ಲಿ ಭಾಗಿಯಾಗಿರಕೂಡದು.

ಈ ನಿಯಮಗಳಿಗನುಗುಣವಾಗಿ ಆಯ್ಕೆಯಾದ ಪ್ರತಿನಿಧಿಗಳು ಕಾಲೇಜು ವಿದ್ಯಾರ್ಥಿ ಸಂಘದ ಪದಾಧಿಕಾರಿಗಳನ್ನು ಪಾರಾ 'ಜಿ' ರ ಅನ್ವಯ ಚುನಾಯಿಸುವರು.

## ಬಿ. ಪ್ರಚಾರ

1. ತರಗತಿ ಪ್ರತಿನಿಧಿಗಳ ಆಯ್ಕೆಯ ಪ್ರಕ್ರಿಯೆ ಪೂರ್ಣಗೊಳ್ಳದ ಹೊರತು ವಿದ್ಯಾರ್ಥಿ ಸಂಘದ ಪದಾಧಿಕಾರಿಗಳ ಆಯ್ಕೆಗೆ ಪ್ರಚಾರ ನಡೆಸುವಂತಿಲ್ಲ.
2. ಚುನಾವಣಾ ಪ್ರಚಾರ ಕಾಲೇಜಿನ ಘನತೆ, ಗೌರವಗಳಿಗೆ ಧಕ್ಕೆ ಬಾರದ ರೀತಿಯಲ್ಲಿ ನಡೆಸಬೇಕು. ಪ್ರಚಾರವನ್ನು ಯಾವುದೇ ರೀತಿಯಲ್ಲಿ ಸಾರ್ವಜನಿಕರಿಗೆ ತೊಂದರೆಯಾಗದಂತೆ ನಡೆಸಬೇಕು.
3. **ಚುನಾವಣಾ ಉದ್ದೇಶಕ್ಕಾಗಿ ಸಾರ್ವಜನಿಕರಿಂದ ಹಣ ಸಂಗ್ರಹ ಮಾಡುವುದನ್ನು ಕಡ್ಡಾಯವಾಗಿ ನಿಷೇಧಿಸಲಾಗಿದ್ದು, ಇಂತಹ ಹಣ ಸಂಗ್ರಹದ ಬಗ್ಗೆ ಮಾಹಿತಿ ದೊರೆತಲ್ಲಿ ಹಣ ಸಂಗ್ರಹ ಮಾಡಿದ ವಿದ್ಯಾರ್ಥಿಯ ಅಭ್ಯರ್ಥಿತನವನ್ನು ರದ್ದು ಪಡಿಸಲಾಗುವುದು.**
4. ಪ್ರಚಾರವು ತರಗತಿ ಮತ್ತು ಕಾಲೇಜು ಆವರಣಗಳಿಗೆ ಸೀಮಿತವಾಗಿರಬೇಕು.
5. ಚುನಾವಣೆಯ ಪ್ರಕ್ರಿಯೆಯ ಅವಧಿಯಲ್ಲಿ ಕಾಲೇಜಿನ ಯಾವುದೇ ವಸ್ತುವಿಗೆ ಸ್ವಲ್ಪವೂ ಹಾನಿಯಾಗದಂತೆ ನೋಡಿಕೊಳ್ಳುವುದು ಸ್ಪರ್ಧಿ ಮತ್ತು ವಿದ್ಯಾರ್ಥಿಗಳ ಕರ್ತವ್ಯವಾಗಿರುತ್ತದೆ.
6. ಪಟಾಕಿಗಳನ್ನು ಸಿಡಿಸುವುದು, ವಾದ್ಯಗಳನ್ನು ಬಳಸುವುದು, ಧ್ವನಿವರ್ಧಕಗಳನ್ನು ಬಳಸುವುದನ್ನು ನಿಷೇಧಿಸಲಾಗಿದೆ.
7. ಕಾಲೇಜಿನ ಗೋಡೆಗಳ ಮೇಲೆ, ತರಗತಿಗಳ ಗೋಡೆಗಳ ಮೇಲೆ ಹಾಗೂ ಕರಿ ಹಲಗೆಯ ಮೇಲೆ ಏನನ್ನೂ ಬರೆಯಬಾರದು.

8. ಚುನಾವಣಾ ಸಂಬಂಧ ಯಾವುದೇ ಭಿತ್ತಿಪತ್ರ ಬ್ಯಾನರ್, ಧ್ವಜ ಮತ್ತು ಪತಾಕೆ, ಕರಪತ್ರಗಳನ್ನು ಬಳಸಬಾರದು, ಬಳಸಿದ್ದಲ್ಲಿ ಅಂತಹವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗುವುದು.

9. ಚುನಾವಣಾ ಪ್ರಚಾರಕ್ಕೆ ಅಥವಾ ಚುನಾವಣೆಗೆ ಸಂಬಂಧಿಸಿದಂತೆ ಯಾರಿಂದಲೂ ಆಕ್ಷೇಪಣಾ ವರದಿಗಳು ಬಾರದಂತೆ ಸ್ಪರ್ಧಿಗಳು ಮತ್ತು ವಿದ್ಯಾರ್ಥಿ/ ವಿದ್ಯಾರ್ಥಿನಿಯರು ನಡೆದುಕೊಳ್ಳತಕ್ಕದ್ದು.

10. ಚುನಾವಣೆಯ ಪ್ರಕ್ರಿಯೆಯ ವೇಳೆಯಲ್ಲಿ ಹೊರಗಿನ ಯಾವುದೇ ವ್ಯಕ್ತಿಗಳಾಗಲೀ ಅಥವಾ ಕಾಲೇಜಿನ ಹಳೆ ವಿದ್ಯಾರ್ಥಿಗಳಾಗಲೀ ಕಾಲೇಜಿನ ಆವರಣಕ್ಕೆ ಬರುವುದನ್ನು, ಕಾಲೇಜಿನ ವಿದ್ಯಾರ್ಥಿಗಳು ಇಂತಹ ವ್ಯಕ್ತಿಗಳನ್ನು ಕರೆ ತರುವುದನ್ನು ನಿಷೇಧಿಸಲಾಗಿದೆ.

11. ಕಾಲೇಜಿನ ಆವರಣದೊಳಗೆ ಚುನಾವಣೆಯ ಪ್ರಕ್ರಿಯೆ ಪ್ರಾರಂಭವಾದ ಬಳಿಕ ವಾಹನಗಳನ್ನು ನಿಗದಿತ ಸ್ಥಳದಲ್ಲಿ ನಿಲ್ಲಿಸತಕ್ಕದ್ದು.

12. ಪ್ರಚಾರವನ್ನು ಸೌಹಾರ್ದಯುತವಾಗಿ ವಿದ್ಯಾರ್ಥಿಗಳ ನಡುವೆ ವಿರಸ ಬಾರದ ರೀತಿಯಲ್ಲಿ ನಿಗದಿತ ದಿನದಲ್ಲಿ ಮತ್ತು ಸಮಯದಲ್ಲಿ ಮಾತ್ರ ನಡೆಸತಕ್ಕದ್ದು.

13. ಪ್ರಚಾರದ ಸಂದರ್ಭದಲ್ಲಿ ಅವಾಚ್ಯ ಮಾತುಗಳನ್ನಾಗಲೀ ವ್ಯಕ್ತಿಗತ ಟೀಕೆಗಳನ್ನಾಗಲೀ ಮಾಡಬಾರದು.

14. ಚುನಾವಣಾ ಪ್ರಚಾರವನ್ನು ಕಾಲೇಜಿನ ಆವರಣದಲ್ಲಿ ಚುನಾವಣಾ ವೇಳಾಪಟ್ಟಿಯಲ್ಲಿ ಸೂಚಿತವಾದ ದಿನಾಂಕ ಮತ್ತು ಅವಧಿಯವರೆಗೆ ಮಾತ್ರ ನಡೆಸಬಹುದು.

15. ಚುನಾವಣೆಗೆ ಸ್ಪರ್ಧಿಸುವ ಉಮೇದುವಾರರು ಯಾವುದೇ ರಾಜಕೀಯ ಸಂಘಟನೆಯೊಂದಿಗೆ ಗುರುತಿಸಿಕೊಳ್ಳಬಾರದು.

16. ಪ್ರಚಾರದ ಸಮಯದಲ್ಲಿ ಯಾವುದೇ ಜಾತಿ, ಕೋಮು ಭಾವನೆ ಪ್ರಚೋದಿಸುವ ಕಾರ್ಯದಲ್ಲಿ ತೊಡಗಬಾರದು.

17. ಮತದಾರರಿಗೆ ಹಣ ಅಥವಾ ಇತರ ಯಾವುದೇ ರೂಪದಲ್ಲಿ ಆಮಿಷಗಳನ್ನು ನೀಡಬಾರದು.

18. ಚುನಾವಣೆಯ ಫಲಿತಾಂಸ ಘೋಷಣೆಯಾದ ಬಳಿಕ ಅರ್ಧಗಂಟೆಯ ಒಳಗಾಗಿ ವಿದ್ಯಾರ್ಥಿಗಳು ಕಾಲೇಜು ಆವರಣದಿಂದ ತೆರಳಬೇಕು.

ಈ ನಿಯಮಗಳನ್ನು ಪಾಲಿಸದಿದ್ದಲ್ಲಿ ಅಂತಹ ಸ್ಪರ್ಧಿಗಳ ಉಮೇದುವಾರಿಕೆಯನ್ನು ರದ್ದು ಮಾಡಬಹುದಾದ ಹಕ್ಕು ಪ್ರಾಂಶುಪಾಲರು/ ಚುನಾವಣಾ ಅಧಿಕಾರಿಗಳದ್ದಾಗಿರುತ್ತದೆ.

## ಸಿ. ಮತದಾನ

**ಮತದಾನ ಸಂದರ್ಭದಲ್ಲಿ ವಿದ್ಯಾರ್ಥಿಗಳು ಅನುಸರಿಸಬೇಕಾದ ನಿಯಮ ಹಾಗೂ ನಿಬಂಧನೆಗಳು:**

1. ನಿಗದಿಯಾದ ದಿನಾಂಕದಂದು ನಿಗದಿಯಾದ ಸಮಯದ ಒಳಗೆ ಮತದಾನ ಮಾಡಬೇಕು.
2. ವಿದ್ಯಾರ್ಥಿಗಳು ಯಾವ ಸ್ಥಾನಕ್ಕೆ ಎಲ್ಲಿ ಮತದಾನ ಮಾಡುವುದೆಂಬುದನ್ನು ಸೂಚಿಸಲಾಗಿರುತ್ತದೆ. ಅದರಂತೆ ಆಯಾ ಕೊಠಡಿಯಲ್ಲಿ ಮತದಾನ ಮಾಡಬೇಕು.
3. ಮತ ಕೇಂದ್ರದ ಮುಂದೆ ಸರತಿಯ ಸಾಲಿನಲ್ಲಿ ಬಂದು ಮತದಾನ ಮಾಡಬೇಕು.
4. ಮತ ಕೇಂದ್ರದ ಒಳಗಾಗಲೀ ಹೊರಗಾಗಲೀ ಗದ್ದಲ ಮಾಡುವುದು, ಅಶಿಸ್ತಿನಿಂದ ವರ್ತಿಸುವುದನ್ನು ನಿಷೇಧಿಸಲಾಗಿದೆ. ಮತದಾನದ ಬಗೆಗೆ ಯಾವುದೇ ಅಹವಾಲು ಇದ್ದಲ್ಲಿ ಪಾಂಶುಪಾಲರು/ಚುನಾವಣಾ ಅಧಿಕಾರಿಗಳಲ್ಲಿ ದೂರು ನೀಡಬಹುದು.
5. ಮತದಾನ ಮಾಡುವ ಸಂದರ್ಭದಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಯೂ ಕಾಲೇಜು ಶುಲ್ಕ ನೀಡಿದ ರಶೀದಿ ಮತ್ತು ಗುರುತಿನ ಚೀಟಿಯನ್ನು ಹಾಜರು ಪಡಿಸಲೇಬೇಕು.
6. ಮತದಾನ ಮಾಡಿದ ನಂತರ ಆ ಸ್ಥಳದಿಂದ ಹೊರಹೋಗಬೇಕು.
7. ಮತ ಕೇಂದ್ರದ ಬಳಿ ಮತದಾನ ಮಾಡುವ ವಿದ್ಯಾರ್ಥಿಗಳನ್ನು ಬಿಟ್ಟು, ಉಳಿದ ವಿದ್ಯಾರ್ಥಿಗಳಾಗಲೀ, ಹೊರಗಿನವರಾಗಲೀ ಅನಗತ್ಯವಾಗಿ ತಿರುಗಾಡಬಾರದು.
8. ತರಗತಿ ಪ್ರತಿನಿಧಿಗಳ ಸ್ಥಾನಕ್ಕೆ ಮತದಾನ ನಡೆಯುವ ಕೇಂದ್ರಗಳಲ್ಲಿ ಆಯಾ ತರಗತಿಯ ಪ್ರತಿನಿಧಿ ಸ್ಥಾನದ ಸ್ಪರ್ಧಿಗಳು ಮಾತ್ರ ಮತ ಪೆಟ್ಟಿಗೆಯನ್ನು ಮೊಹರು ಮಾಡುವಾಗ, ಮತದಾನ ಮಾಡುವಾಗ ಹಾಜರಿರಬಹುದು. ಮತದಾನದ ಕ್ರಿಯೆಗೆ ಯಾವ ತೊಂದರೆಯಾಗದಂತೆ ದೂರದಲ್ಲಿ ಕುಳಿತು ವೀಕ್ಷಿಸಲು ಅವಕಾಶವಿದೆ (ಸ್ಪರ್ಧಿಗಳಿಗೆ ಮಾತ್ರ).
9. ನಿಗದಿಯಾದ ಸಮಯದ ಒಳಗೆ ಹಾಜರಿದ್ದ ವಿದ್ಯಾರ್ಥಿಗಳಿಗೆಲ್ಲಾ ಮತದಾನ ಮಾಡಲು ಅವಕಾಶವಾಗದಿದ್ದಲ್ಲಿ ಮತದಾನ ಪೂರ್ಣಗೊಳ್ಳುವ ಮುನ್ನ ಸರತಿಯ ಸಾಲಿನಲ್ಲಿರುವ ವಿದ್ಯಾರ್ಥಿಗಳಿಗೆ ಗುರುತಿನ ಚೀಟಿ ನೀಡಿ ಅವರೆಲ್ಲರೂ ಮತದಾನ ಮಾಡುವ ವರೆಗೆ ಅವಕಾಶ ನೀಡಲಾಗುವುದು.

## ಡಿ. ಮತಗಳ ಎಣಿಕೆ

1. ಮತಗಳ ಎಣಿಕೆ ನಡೆಯುವ ಸ್ಥಳಕ್ಕೆ ಉಮೇದಾರರನ್ನು ಹೊರತು ಪಡಿಸಿ ಉಳಿದ ಯಾವುದೇ ವಿದ್ಯಾರ್ಥಿಗಳು ಯಾವುದೇ ಕಾರಣಕ್ಕೆ ಪ್ರವೇಶ ಮಾಡಬಾರದು.

2. ಮತಗಳ ಎಣಿಕೆ ಸಂದರ್ಭದಲ್ಲಿ ಸ್ಪರ್ಧಿಗಳಿಗೆ ಮತ್ತು ಅವಿರೋಧವಾಗಿ ಆಯ್ಕೆಯಾದ ಪ್ರತಿನಿಧಿಗಳಿಗೆ ಮಾತ್ರ ಎಣಿಕೆ ಸ್ಥಳಕ್ಕೆ ಪ್ರವೇಶವಿರುತ್ತದೆ.

3. ಎಣಿಕೆಯ ಸ್ಥಳದಲ್ಲಿ ಹಾಜರಿರುವ ಸ್ಪರ್ಧಿಗಳು ಮತ್ತು ಅವಿರೋಧವಾಗಿ ಆಯ್ಕೆಯಾದವರು ಎಲ್ಲಾ ಸ್ಥಾನಗಳ ಮತಗಳ ಎಣಿಕೆ ಪೂರ್ಣವಾಗಿ ನಡೆದು ಫಲಿತಾಂಶ ಪ್ರಕಟಣೆಯಾಗುವ ವರೆಗೆ ಕೊಠಡಿಯಿಂದ ಹೊರಗೆ ಬರುವಂತಿಲ್ಲ.

4. ಇತರ ವಿದ್ಯಾರ್ಥಿಗಳು ಎಣಿಕೆ ಕೇಂದ್ರದಿಂದ 100 ಗಜ ದೂರದಲ್ಲಿ ಇರಬಹುದು.

5. ಫಲಿತಾಂಶ ಪ್ರಕಟವಾದ ಕೂಡಲೇ ವಿದ್ಯಾರ್ಥಿಗಳು ಕಾಲೇಜಿನ ಆವರಣವನ್ನು ಬಿಟ್ಟು ಹೊರಗೆ ಹೋಗತಕ್ಕದ್ದು.

6. ಇಬ್ಬರು ಸ್ಪರ್ಧಿಗಳ ನಡುವೆ ಸಮಾನ ಮತಗಳು ಬಂದಾಗ ಪ್ರಾಂಶುಪಾಲರ ಸಮ್ಮುಖದಲ್ಲಿ ಚೀಟಿ ಎತ್ತುವ ಮೂಲಕ ಆಯ್ಕೆ ನಿರ್ಧರಿಸಲಾಗುವುದು.

7. ಮತಗಳ ಮರು ಎಣಿಕೆಯನ್ನು ಅಗತ್ಯ ಕಂಡು ಬಂದಲ್ಲಿ ಎಣಿಕೆ ಕೇಂದ್ರದಲ್ಲಿ ಮಾಡಬಹುದು.

## ಎಫ್. ಸಾಮಾನ್ಯ ನಿಯಮಗಳು

1. ಚುನಾವಣೆ ಪ್ರಕ್ರಿಯೆ ಪ್ರಾರಂಭವಾದಂದಿನಿಂದ ಮುಗಿಯುವ ವರೆಗೆ ವಿದ್ಯಾರ್ಥಿಗಳು ಶಿಸ್ತು ಹಾಗೂ ಸಂಯಮದಿಂದ ವರ್ತಿಸಬೇಕು. ವಿದ್ಯಾರ್ಥಿಗಳ ನಡುವೆ ವೈಮನಸ್ಸು ತರುವ ಯಾವುದೇ ಕೆಲಸ ಮಾಡಬಾರದು.

2. ಯಾವುದೇ ವಿವಾದ ಅಥವಾ ಅಹವಾಲುಗಳಿದ್ದರೆ ಪ್ರಾಂಶುಪಾಲರಿಗೆ ಲಿಖಿತ ಮೂಲಕ ಅರ್ಜಿ ಸಲ್ಲಿಸಿ ಅವರು ನಿರ್ದೇಶಿಸಿದ ರೀತಿಯಲ್ಲಿ ನಡೆದುಕೊಳ್ಳಬೇಕು.

3. ಯಾವುದೇ ವಿವಾದ ಅಥವಾ ವಿಷಯಗಳಿಗೆ ಸಂಬಂಧಿಸಿದಂತೆ ಪ್ರಾಂಶುಪಾಲರ, ಚುನಾವಣಾ ಅಧಿಕಾರಿಯವರ ತೀರ್ಮಾನ ಅಂತಿಮವಾದದ್ದಾಗಿರುತ್ತದೆ. ಚುನಾವಣೆಗೆ ಸಂಬಂಧಿಸಿದಂತೆ ಇರುವ ನಿಯಮಗಳನ್ನು ಪಾರಿಪಾಲಿಸದಿದ್ದಲ್ಲಿ ಹಾಗೂ ಶಿಸ್ತು ಶಾಂತಿಗೆ ಭಂಗ ತರುವಂತಹ ಸಂದರ್ಭದಲ್ಲಿ ಪ್ರಾಂಶುಪಾಲರು / ಚುನಾವಣಾ ಅಧಿಕಾರಿ/ ಚುನಾವಣೆಯನ್ನು ರದ್ದು ಪಡಿಸಬಹುದು.

## ಜಿ. ವಿದ್ಯಾರ್ಥಿ ಸಂಘದ ಪದಾಧಿಕಾರಿಗಳನ್ನು ಚುನಾಯಿಸುವ ವಿಧಾನ

1. ಚುನಾವಣಾ ಫಲಿತಾಂಶ ಪ್ರಕಟವಾದೊಡನೆ ಮತ ಎಣಿಕೆ ಕೊಠಡಿಯಿಂದ ಆಯ್ಕೆಯಾದ ಪ್ರತಿನಿಧಿಗಳು ಅಲ್ಲಿಯೇ ಉಳಿದು ಪರಾಜಿತ ಸ್ಪರ್ಧಿಗಳು

ಪ್ರಾಂಶುಪಾಲರು/ಚುನಾವಣಾ ಅಧಿಕಾರಿ ನೀಡುವ ಸೂಚನೆಯಂತೆ ನಡೆದುಕೊಳ್ಳುವುದು.

2. ಯಾವುದೇ ಸಂದರ್ಭದಲ್ಲಿ ಆಯ್ಕೆಯಾದ ತರಗತಿ ಪ್ರತಿನಿಧಿ/ಮಹಿಳಾ ಪ್ರತಿನಿಧಿ ಯಾವುದೇ ಕಾರಣದಿಂದ ಗೈರು ಹಾಜರಿದ್ದಲ್ಲಿ ಸಂಘದ ಪದಾಧಿಕಾರಿಗಳ ಚುನಾವಣಾ ಪ್ರಕ್ರಿಯೆಯನ್ನು ನಿಲ್ಲಿಸಲಾಗುವುದಿಲ್ಲ.

3. ಕೆಳಕಂಡ ಪದಾಧಿಕಾರಿಗಳ ಸ್ಥಾನಕ್ಕೆ ಆಯ್ಕೆ ನಡೆಯುವುದು.
    1. ವಿದ್ಯಾರ್ಥಿ ಸಂಘದ ಅಧ್ಯಕ್ಷ (ಅಂತಿಮ ಪದವಿ ವಿದ್ಯಾರ್ಥಿ/ವಿದ್ಯಾರ್ಥಿನಿ)
    2. ವಿದ್ಯಾರ್ಥಿ ಸಂಘದ ಕಾರ್ಯದರ್ಶಿ (ಅಂತಿಮ ಪದವಿ ವಿದ್ಯಾರ್ಥಿ/ವಿದ್ಯಾರ್ಥಿನಿ)
    3. ವಿದ್ಯಾರ್ಥಿ ಸಂಘದ ಸಹ ಕಾರ್ಯದರ್ಶಿ (ಅಂತಿಮ ಪದವಿ ವಿದ್ಯಾರ್ಥಿನಿಗೆ ಮೀಸಲು)
    4. ಲಲಿತ ಕಲಾ ಸಂಘದ ಕಾರ್ಯದರ್ಶಿ (ಅಂತಿಮ ಪದವಿ ವಿದ್ಯಾರ್ಥಿ/ವಿದ್ಯಾರ್ಥಿನಿ)
    5. ಲಲಿತ ಕಲಾ ಸಂಘದ ಸಹ ಕಾರ್ಯದರ್ಶಿ (ಅಂತಿಮ ಪದವಿ ವಿದ್ಯಾರ್ಥಿನಿಗೆ ಮೀಸಲು)

## ಪದಾಧಿಕಾರಿಗಳ ಚುನಾವಣೆ ಸಂಬಂಧಿಸಿದ ನಿಯಮಗಳು

1. ಕಾಲೇಜಿನ ವಿದ್ಯಾರ್ಥಿ ಸಂಘದ ಅಧ್ಯಕ್ಷ, ಕಾರ್ಯದರ್ಶಿ, ಸಹ ಕಾರ್ಯದರ್ಶಿನಿ, ಲಲಿತಕಲಾ ಸಂಘದ ಕಾರ್ಯದರ್ಶಿ ಮತ್ತು ಸಹ ಕಾರ್ಯದರ್ಶಿನಿ ಸ್ಥಾನಕ್ಕೆ ಸ್ಪರ್ಧಿಸುವ ತರಗತಿ ಪ್ರತಿನಿಧಿ ಅಥವಾ ಮಹಿಳಾ ಪ್ರತಿನಿಧಿಯಾಗಿ ಆಯ್ಕೆಯಾದ ಪ್ರತಿನಿಧಿ ಅಂತಿಮ ಪದವಿ ತರಗತಿಯ ಪ್ರತಿನಿಧಿ ಅಥವಾ ಮಹಿಳಾ ಪ್ರತಿನಿಧಿಯಾಗಿರಬೇಕು. ಹಾಗೂ ಆತ/ಆಕೆ ಅವಿರತವಾಗಿ ಎರಡು ಪೂರ್ಣ ವರ್ಷದ ವ್ಯಾಸಂಗವನ್ನು ಈ ಕಾಲೇಜಿನಲ್ಲಿ ಮಾಡಿರತಕ್ಕದ್ದು.
2. ವಿದ್ಯಾರ್ಥಿ ಸಂಘ ಮತ್ತು ಲಲಿತ ಕಲಾ ಸಂಘದ ಸಹ ಕಾರ್ಯದರ್ಶಿ ಸ್ಥಾನಕ್ಕೆ ಸ್ಪರ್ಧಿಸುವವರು ಆಯ್ಕೆಯಾದ ಮಹಿಳಾ ಪ್ರತಿನಿಧಿ (Lady Rep) ಅಥವಾ ಅಂತಿಮ ತರಗತಿಯ ಪ್ರತಿನಿಧಿಯಾಗಿದ್ದು ಮಹಿಳೆಯಾಗಿರಬೇಕು. ಮತ್ತು ಎರಡು ವರ್ಷ ಈ ಕಾಲೇಜಿನಲ್ಲಿ ಓದಿರಬೇಕು.
3. ತರಗತಿ ಪ್ರತಿನಿಧಿ ಮತ್ತು ಮಹಿಳಾ ಪ್ರತಿನಿಧಿಯಾಗಿ ಆಯ್ಕೆಯಾದವರು ಕಾಲೇಜಿನ ವಿದ್ಯಾರ್ಥಿ ಸಂಘದ ಪದಾಧಿಕಾರಿಗಳನ್ನು ಆಯ್ಕೆ ಮಾಡುವರು.

## ಆಯ್ಕೆಯ ಪ್ರಕ್ರಿಯೆ

1. ಪ್ರಾಂಶುಪಾಲರು/ನಿರ್ದೇಶಕರು/ಉಪ ನಿರ್ದೇಶಕರು ಹಾಗೂ ಚುನಾವಣಾ ಸಮಿತಿ ಸಹಕಾರದೊಂದಿಗೆ ಪದಾಧಿಕಾರಿಗಳ ಚುನಾವಣಾ ಪ್ರಕ್ರಿಯೆ ನಡೆಯುವುದು.
2. ಪ್ಯಾರಾ 'ಜಿ' ಕ್ರಮಸಂಖ್ಯೆ 3ರಲ್ಲಿ ಸೂಚಿಸಿರುವ ಸ್ಥಾನಗಳಿಗೆ ನಾಮಪತ್ರವನ್ನು ಸ್ವೀಕರಿಸಲಾಗುವುದು.
3. ಮೇಲಿನ ಯಾವುದೇ ಸ್ಥಾನಕ್ಕೆ ಅಂತಿಮ ಪದವಿ ತರಗತಿಯ ಪ್ರತಿನಿಧಿಗಳು ಅರ್ಹರಾಗಿರುತ್ತಾರೆ. ಆದರೆ ಒಬ್ಬ ಪ್ರತಿನಿಧಿ ಒಂದು ಸ್ಥಾನಕ್ಕೆ ಆಯ್ಕೆ ಬಯಸಲು ಅರ್ಹತೆ ಇದೆ.
4. ನಾಮಪತ್ರ ಸ್ವೀಕರಿಸಿದ ಮೇಲೆ ಅಂಗೀಕೃತ ಅಭ್ಯರ್ಥಿಗಳ ಹೆಸರುಗಳನ್ನು ಆಯಾಯ ಸ್ಥಾನಕ್ಕೆ ಮುಂದೆ ಕರಿ ಹಲಗೆ ಮೇಲೆ ಪ್ರಕಟಿಸಲಾಗುವುದು.
5. ಪ್ರತಿಯೊಬ್ಬ ಅಭ್ಯರ್ಥಿಗೆ ಪ್ರಚಾರ ಭಾಷಣ ಮಾಡಲು 2 ನಿಮಿಷಗಳ ಸಮಯ ಕೊಡಲಾಗುವುದು. ಮೊದಲು ಅಧ್ಯಕ್ಷ ಸ್ಥಾನದ ಸ್ಪರ್ಧಿಗಳು, ಕಾರ್ಯದರ್ಶಿ ಸ್ಥಾನದ ಸ್ಪರ್ಧಿಗಳು, ಸಹ ಕಾರ್ಯದರ್ಶಿ ಸ್ಥಾನದ ಸ್ಪರ್ಧಿಗಳು ಮತ್ತು ಲಲಿತ ಕಲಾ ಸಂಘದ ಕಾರ್ಯದರ್ಶಿ ಮತ್ತು ಸಹ ಕಾರ್ಯದರ್ಶಿ ಸ್ಥಾನದ ಅಭ್ಯರ್ಥಿಗಳು ಒಬ್ಬೊಬ್ಬರಾಗಿ ಭಾಷಣ ಮಾಡುವುದು.
6. ಯಾವುದೇ ಸ್ಥಾನಕ್ಕೆ ಒಬ್ಬ ಉಮೇದುವಾರ ಇದ್ದಲ್ಲಿ ಆತ/ಆಕೆಯನ್ನು ಅವಿರೋಧವಾಗಿ ಆಯ್ಕೆಯಾದವರು ಎಂದು ತಿಳಿಯಲಾಗುತ್ತದೆ.
7. ಯಾವುದೇ ಸ್ಥಾನಕ್ಕೆ ನಾಮಪತ್ರಗಳಿಲ್ಲದಿದ್ದಲ್ಲಿ ಅಥವಾ ನಾಮಪತ್ರಗಳೆಲ್ಲ ತಿರಸ್ಕೃತವಾದಲ್ಲಿ ಅಂತಹ ಸ್ಥಾನಕ್ಕೆ ಪ್ರಾಂಶುಪಾಲರು ನಾಮಕರಣ ಮಾಡಬಹುದು.
8. ಅಗತ್ಯವಿದ್ದಲ್ಲಿ ಭಾಷಣದ ಬಳಿಕ ಅಭ್ಯರ್ಥಿಗಳ ಸ್ಪರ್ಧೆ ಇರುವ ಸ್ಥಾನಗಳಿಗೆ ಆಯಾ ಸ್ಥಾನದಲ್ಲಿ ಸ್ಪರ್ಧಿಸಿರುವ ಹೆಸರುಗಳುಳ್ಳ ಮತಪತ್ರವನ್ನು ಪ್ರತಿಯೊಬ್ಬ ಮತದಾರ ಪ್ರತಿನಿಧಿಗೆ ಕೊಡಲಾಗುವುದು.
9. ಪ್ರತಿ ಮತದಾನ ಗುಪ್ತವಾಗಿ ನಡೆಯಬೇಕು. ಪ್ರತಿ ಮತದಾನ ಮತ ಪತ್ರದಲ್ಲಿ ಮತ ಗುರುತಿಸಿ ಕ್ರಮಬದ್ಧವಾಗಿ ಮಡಚಿ ಪ್ರಾಂಶುಪಾಲರು ಸೂಚಿಸಿದ ಪೆಟ್ಟಿಗೆಯಲ್ಲಿ ಹಾಕತಕ್ಕದ್ದು.
10. ಎಲ್ಲಾ ಪ್ರತಿನಿಧಿಗಳು ಮತ ಚಲಾಯಿಸಿದ ಬಳಿಕ ಮತಗಣನೆ ನಡೆಯುವುದು. ಮತ ಎಣಿಕೆಯ ಸಮಯದಲ್ಲಿ ಎಲ್ಲಾ ಪ್ರತಿನಿಧಿಗಳು ಹಾಜರಿರಬೇಕು.
11. ಇಬ್ಬರು ಅಭ್ಯರ್ಥಿಗಳಿಗೆ ಒಂದೇ ಸಂಖ್ಯೆಯ ಮತ ದೊರೆತಲ್ಲಿ ಪ್ರಾಂಶುಪಾಲರು ಸೂಚಿಸಿದಂತೆ ಅಥವಾ ಚೀಟಿ ಎತ್ತುವ ಮೂಲಕ ಆಯ್ಕೆ ನಿರ್ಣಯಿಸಲಾಗುವುದು.
12. ಎಲ್ಲಾ ಫಲಿತಾಂಶಗಳು ಪ್ರಕಟವಾದ ಬಳಿಕವೇ ಪ್ರತಿನಿಧಿಗಳು ಮತ್ತು ಚುನಾಯಿತ ಪದಾಧಿಕಾರಿಗಳು ಕೊಠಡಿಯಿಂದ ಹೊರ ಬರಲು ಅನುಮತಿ ನೀಡಲಾಗುವುದು.
13. ಚುನಾವಣೆಯ ಪ್ರಕ್ರಿಯೆಯ ಪ್ರಾರಂಭವಾದಂದಿನಿಂದ ಚುನಾವಣೆ ಮುಗಿಯುವ ತನಕ ಎಲ್ಲಾ ವಿವಾದಗಳಿಗೆ ಪ್ರಾಂಶುಪಾಲರ ತೀರ್ಮಾನ ಅಂತಿಮವಾದದ್ದು. ಅದನ್ನು ಮುಂದೆ ಎಲ್ಲಿಯೂ ಪ್ರಶ್ನಿಸುವಂತಿಲ್ಲ.

15. ವಿದ್ಯಾರ್ಥಿ ಸಂಘದ ಪದಾಧಿಕಾರಿಗಳು : ಪ್ರತಿನಿಧಿಗಳು ಸಹ ಆಯಾಯ ಶೈಕ್ಷಣಿಕ ವರ್ಷದ ಅವಧಿಯಲ್ಲಿ ಯಾವುದೇ ಅಶಿಸ್ತು ಮತ್ತು ಕ್ರಿಮಿನಲ್ ಮೊಕದ್ದಮೆಗಳಲ್ಲಿ ಭಾಗಿಯಾದಲ್ಲಿ ಅವರು ಪ್ರಾತಿನಿಧ್ಯವನ್ನು ರದ್ದುಗೊಳಿಸುವ ಅಧಿಕಾರ ಪ್ರಾಂಶುಪಾಲರಿಗೆ ಇದೆ.

16. ಚುನಾವಣೆಗೆ ಮೊದಲು, ಚುನಾವಣೆ ಕಾಲದಲ್ಲಿ ಮತ್ತು ಚುನಾವಣೆಯ ನಂತರ ಸಹ ಕಾಲೇಜಿನಲ್ಲಿ ಶಾಂತಿ ಮತ್ತು ಶಿಸ್ತು ಕಾಪಾಡುವ ಸಲುವಾಗಿ ಪ್ರಾಂಶುಪಾಲರಿಗೆ ಅಗತ್ಯವೆಂದು ಕಂಡುಬಂದಂತಹ ಸೂಕ್ತ ಕ್ರಮ ಕೈಗೊಳ್ಳಲು ಸಂಪೂರ್ಣ ಅಧಿಕಾರವಿದೆ.

ಮಂಗಳೂರು

**ಡಾ. ಅನಸೂಯ ರೈ**
ಪ್ರಾಂಶುಪಾಲರು

**ಸೂಚನೆ : ನಾಮಪತ್ರವನ್ನು ಸಲ್ಲಿಸುವಾಗ ಗಮನಿಸಬೇಕಾದ ಅಂಶಗಳು**

1. ಸ್ಪರ್ಧಿಯ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರವನ್ನು ನಾಮಪತ್ರದಲ್ಲಿ ಸೂಚಿಸಿದ ಜಾಗದಲ್ಲಿ ಅಂಟಿಸಿರಬೇಕು.
2. ಸ್ಪರ್ಧಿ ಆತನ ಸೂಚಕ ಹಾಗೂ ಅನುಮೋದಕರು ಕಾಲೇಜು ಶುಲ್ಕ ನೀಡಿದ ರಶೀದಿ ಮತ್ತು ಗುರುತಿನ ಪತ್ರ, ಎಸ್.ಎಸ್.ಎಲ್.ಸಿ. ಅಂಕ ಪಟ್ಟಿ ತಾನು ತೇರ್ಗಡೆಯಾದ ಸೆಮೆಸ್ಟರ್ ಪರೀಕ್ಷೆಗಳ ಅಂಕಪಟ್ಟಿ ಇವುಗಳ ದೃಢೀಕೃತ ಜೆರಾಕ್ಸ್ ಪ್ರತಿಯನ್ನು ನಾಮಪತ್ರಕ್ಕೆ ಲಗತ್ತಿಸಬೇಕು. ಮೂಲ ಪತ್ರಗಳನ್ನು ನಾಮಪತ್ರ ಸಲ್ಲಿಸುವಾಗ ಹಾಜರುಪಡಿಸಬೇಕು.
3. ನಾಮಪತ್ರ ಸಲ್ಲಿಕೆಗೆ ಸಂಬಂಧಿಸಿ ನಿಗದಿತ ಶುಲ್ಕ ನೀಡಿದ ದಾಖಲೆಗಳನ್ನು ನಾಮಪತ್ರಕ್ಕೆ ಲಗತ್ತಿಸಬೇಕು.
4. ಸ್ಪರ್ಧಿ ಮತ್ತು ಆತನ ಸೂಚಕ ಮತ್ತು ಅನುಮೋದಕರು ನಾಮಪತ್ರ ಸಲ್ಲಿಸುವಾಗ ಹಾಜರಿರಬೇಕು.
5. ನಿಗದಿಯಾದ ದಿನಾಂಕದಂದು, ನಿಗದಿಯಾದ ಸ್ಥಳದಲ್ಲಿ, ನಿಗದಿಯಾದ ಸಮಯದ ಒಳಗೆ ನಾಮಪತ್ರ ಸಲ್ಲಿಸಬೇಕು.
6. ನಾಮಪತ್ರದಲ್ಲಿ ಕೇಳಿರುವ ಎಲ್ಲಾ ಮಾಹಿತಿಗಳನ್ನು ಸ್ಪಷ್ಟವಾದ ಅಕ್ಷರದಲ್ಲಿ ಹಾಗೂ ಪೂರ್ಣವಾಗಿ ಬರೆದಿರಬೇಕು.
7. ದ್ವಿತೀಯ ಮತ್ತು ತೃತೀಯ ಪದವಿ ತರಗತಿಯ ಸ್ಪರ್ಧಿ ಹಿಂದಿನ ಒಂದು / ಎರಡು ವರ್ಷಗಳ ಅಂಕ ಪಟ್ಟಿಯನ್ನು ಲಗತ್ತಿಸಿರಬೇಕು. ಪ್ರಥಮ ಪದವಿ ವಿದ್ಯಾರ್ಥಿಗಳು ಪಿ.ಯು.ಸಿ. ಅಂಕಪಟ್ಟಿ ಲಗತ್ತಿಸಿರಬೇಕು.
8. ಸ್ಪರ್ಧಿಯ ವಯಸ್ಸಿಗೆ ಆಧಾರವಾಗಿ ಎಸ್.ಎಸ್.ಎಲ್.ಸಿ. ಅಂಕಪಟ್ಟಿಯ ಪ್ರತಿಯನ್ನು ಇಡಬೇಕು.

# ವಿಶ್ವವಿದ್ಯಾನಿಲಯ ಕಾಲೇಜು ಮಂಗಳೂರು

## ವಿದ್ಯಾರ್ಥಿ ನಾಯಕರಿಗೆ ಸಂಬಂಧಿಸಿದ ವಿಶೇಷ ನಿಯಮ ಹಾಗೂ ನಿಬಂಧನೆಗಳು

ಪ್ರಸ್ತಾವನೆ: ಕಾಲೇಜಿನ ವಿದ್ಯಾರ್ಥಿ ಸಂಘವು ಪಠ್ಯಪೂರಕ ಚಟುವಟಿಕೆಗಳ ಮೂಲಕ ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನವನ್ನು ಉದ್ದೇಶವಾಗಿಟ್ಟುಕೊಂಡು ಅಸ್ತಿತ್ವದಲ್ಲಿದೆ. ವರ್ಷದಲ್ಲಿ ವಿದ್ಯಾರ್ಥಿ ಸಂಘದ ಚಟುವಟಿಕೆಗಳು ಕ್ರಮಬದ್ಧವಾಗಿ ನಡೆದಾಗಲೇ ಈ ಉದ್ದೇಶವನ್ನು ಸಾಧಿಸಲು ಸಾಧ್ಯ. ಇದರಲ್ಲಿ ತರಗತಿ ಪ್ರತಿನಿಧಿಗಳೇ ಮೊದಲಾಗಿ ವಿದ್ಯಾರ್ಥಿ ಸಂಘದ ಅಧ್ಯಕ್ಷರ ವರೆಗಿನ ಎಲ್ಲಾ ವಿದ್ಯಾರ್ಥಿ ನಾಯಕರ ಹೊಣೆಗಾರಿಕೆ ಮುಖ್ಯ ಪಾತ್ರ ವಹಿಸುವುದಾದ್ದರಿಂದ ವಿದ್ಯಾರ್ಥಿ ನಾಯಕರಿಗೆ ಕೆಲವು ವಿಶೇಷ ನಿಯಮ, ನಿಬಂಧನೆಗಳನ್ನು ಈ ಕೆಳಗಿನಂತೆ ರೂಪಿಸಲಾಗಿದೆ.

### ವಿದ್ಯಾರ್ಥಿ ಸಂಘದ ಅಧ್ಯಕ್ಷ, ಕಾರ್ಯದರ್ಶಿ, ಸಹಕಾರ್ಯದರ್ಶಿ, ಲಲಿತ ಕಲಾ ಸಂಘದ ಕಾರ್ಯದರ್ಶಿ ಮತ್ತು ಸಹಕಾರ್ಯದರ್ಶಿನಿ ಹಾಗೂ ತರಗತಿ ಮತ್ತು ಮಹಿಳಾ ಪ್ರತಿನಿಧಿಗಳಿಗಾಗಿ ವಿಶೇಷ ನಿಯಮ-ನಿಬಂಧನೆಗಳು :

ಎ. ವಿದ್ಯಾರ್ಥಿ ನಾಯಕ (ಅಧ್ಯಕ್ಷ, ಕಾರ್ಯದರ್ಶಿ, ಸಹ ಕಾರ್ಯದರ್ಶಿನಿ, ತರಗತಿ ಪ್ರತಿನಿಧಿ ಇತ್ಯಾದಿ)ರಾಗಿ ಆಯ್ಕೆ ಬಯಸುವವರು ಚುನಾವಣಾ ನಿಯಮಗಳನ್ನು ಪೂರ್ತಿಯಾಗಿ ಓದಿ ತಿಳಿದುಕೊಂಡು ಅವುಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದಾಗಿ ಪ್ರಮಾಣಪೂರ್ವಕ ಬರೆದುಕೊಡಬೇಕು.

**ಬಿ. ವಿದ್ಯಾರ್ಥಿ ನಾಯಕರಾಗಿ ಆಯ್ಕೆ ಬಯಸುವವರು ಮತ್ತು ಆಯ್ಕೆಯಾದವರಿಗೆ ನಿಯಮ ನಿಬಂಧನೆಗಳು.**

1. ಚುನಾವಣಾ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು.
2. ವಿದ್ಯಾರ್ಥಿ ಸಂಘದ ಅಧಿಕೃತ ಕಾರ್ಯಕ್ರಮಗಳ ಹೊರತಾಗಿ ಇತರ ಸಮಯದಲ್ಲಿ ತರಗತಿಗೆ ತಪ್ಪದೆ ಹಾಜರಾಗಿ ಇತರ ವಿದ್ಯಾರ್ಥಿಗಳಿಗೆ ಉತ್ತಮ ಮಾದರಿಯಾಗುವಂತೆ ವರ್ತಿಸಬೇಕು.
3. ಈ ಕೆಳಗಿನ ಚಟುವಟಿಕೆಗಳು ನಿಷಿದ್ಧ.
   - ಅ) ತರಗತಿ ಬಹಿಷ್ಕಾರ ಮಾಡುವುದು ಅಥವಾ ಈ ಬಗ್ಗೆ ಬಲವಂತ ಮಾಡುವುದು
   - ಆ) ಹಣ ಸಂಗ್ರಹ ಮಾಡುವುದು
   - ಇ) ಅಧ್ಯಾಪಕರೊಂದಿಗೆ ಅಥವಾ ಶಿಕ್ಷಕೇತರ ಸಿಬ್ಬಂದಿಯೊಂದಿಗೆ ಅಶಿಸ್ತಿನಿಂದ ಅಥವಾ ಅವಮಾನಕಾರಿಯಾಗಿ ವರ್ತಿಸುವುದು.
   - ಈ) ಆಡಳಿತದಲ್ಲಿ ಹಸ್ತಕ್ಷೇಪ ಮಾಡುವುದು.

4. ತರಗತಿಗಳು ನಡೆಯುವ ಸಮಯದಲ್ಲಿ ಕಾಲೇಜಿನ ಪಠಾರದಲ್ಲಿ ಅಥವಾ ತರಗತಿಗಳ ಎದುರು ಸುತ್ತಾಡುವುದು, ಗುಂಪು ಕೂಡುವುದು, ಸಂಚಾರಕ್ಕೆ ಅಡೆ-ತಡೆ ಮಾಡುವುದು, ಆಡಳಿತದ ಶಿಸ್ತು ಕ್ರಮದಲ್ಲಿ ತಲೆ ಹಾಕುವುದು ಇತ್ಯಾದಿಗಳನ್ನು ಕಡ್ಡಾಯವಾಗಿ ತಪ್ಪಿಸಬೇಕು.

5. ಸಂಘದ ವತಿಯಿಂದ ನಡೆಯುವ ಕಾರ್ಯಕ್ರಮ ಸಿದ್ಧತೆಯ ಕೆಲಸಗಳಲ್ಲಿ ಹಾಗೂ ಕಾರ್ಯಕ್ರಮ ಮುಗಿದ ನಂತರ ಪೀಠೋಪಕರಣ ಇತ್ಯಾದಿಗಳನ್ನು ಮೊದಲಿನಂತೆ ಇರಿಸುವುದರಲ್ಲಿ ಸ್ವಯಂ ಸೇವಕರ ಜೊತೆಯಲ್ಲಿ ಸ್ವತಃ ಕಾರ್ಯ ನಿರ್ವಹಿಸಬೇಕು.

6. ಕಾಲೇಜಿನ ಒಳಗಿನಿಂದಾಗಲಿ, ಹೊರಗಿನಿಂದಾಗಲಿ ಯಾವುದೇ ರೀತಿಯಲ್ಲಿ ವಂತಿಗೆ, ದೇಣಿಗೆ ಸಂಗ್ರಹ ಮಾಡಬಾರದು.

7. ಕಾಲೇಜಿನಲ್ಲಿ ಪ್ರಾಂಶುಪಾಲರ ಅನುಮತಿ ಪಡೆಯದೆ ಮೊಬೈಲು ಬಳಸುವಂತಿಲ್ಲ.

**ಸಿ. ವಿದ್ಯಾರ್ಥಿ ಸಂಘದ ಕಾರ್ಯಕ್ರಮಗಳಲ್ಲಿ ಮನೋರಂಜನೆಯ ಬಗ್ಗೆ :**

1. ಮನೋರಂಜನೆಯ ಕಾರ್ಯಕ್ರಮಗಳನ್ನು ಕಾಲೇಜಿನ ಅಧಿಕೃತ ವಿದ್ಯಾರ್ಥಿಗಳೇ ನೀಡತಕ್ಕದ್ದು. ಇದಕ್ಕಾಗಿ ಹಳೆಯ ವಿದ್ಯಾರ್ಥಿಗಳು ಅಥವಾ ಹೊರಗಿನವರು ಬರುವುದಾಗಲೀ ಅವರನ್ನು ಕರೆತರುವುದಾಗಲೀ ಮಾಡಕೂಡದು. ಹೊರಗಿನಿಂದ ಅಗತ್ಯವಿದ್ದಲ್ಲಿ ಸಂಗೀತ ಸಾಧನಗಳನ್ನು ಮಾತ್ರ ಪ್ರಾಂಶುಪಾಲರ ಪೂರ್ವಾನುಮತಿ ಪಡೆದು ತರಬಹುದು.

2. ಕಾರ್ಯಕ್ರಮಗಳನ್ನು ಬೆಳಗ್ಗೆ 10-00ರಿಂದ ಸಂಜೆ 5-00 ಅವಧಿಯಲ್ಲಿ ಮಾತ್ರ ನೀಡಬಹುದು.

3. ಮನೋರಂಜನೆಯ ಸಂದರ್ಭದಲ್ಲಿ ಪ್ರೇಕ್ಷಕ ವಿದ್ಯಾರ್ಥಿಗಳು ಆಸನಗಳಲ್ಲಿ ಕುಳಿತು ಪ್ರೋತ್ಸಾಹಿಸಬಹುದು. ಬೇರೆ ಯಾವುದೇ ರೀತಿಯ ಅಸಭ್ಯ ವರ್ತನೆಗಳನ್ನು ನಿಯಂತ್ರಿಸಲು ವಿದ್ಯಾರ್ಥಿಗಳು ವಿದ್ಯಾರ್ಥಿ ನಾಯಕರು ಸಹಕರಿಸಬೇಕು. ನಿಯಂತ್ರಣ ಸಾಧ್ಯವಾಗದಿದ್ದಲ್ಲಿ ಕಾರ್ಯಕ್ರಮವನ್ನು ಕೂಡಲೇ ನಿಲ್ಲಿಸಲಾಗುತ್ತದೆ.

**ಡಿ. ಕಾಲೇಜಿನ ಆಡಳಿತ, ಶಿಸ್ತು, ಪರೀಕ್ಷೆಗಳು - ಇತ್ಯಾದಿಗಳ ಬಗ್ಗೆ ವಿದ್ಯಾರ್ಥಿ ನಾಯಕರ ಬಾಧ್ಯತೆಗಳು:**

1. ಈ ವಿಷಯಗಳಲ್ಲಿ ವಿದ್ಯಾರ್ಥಿ ನಾಯಕನನ್ನೂ ಇತರ ವಿದ್ಯಾರ್ಥಿಗಳಂತೆಯೇ ಪರಿಗಣಿಸಲಾಗುತ್ತದೆ. ಈ ರೀತಿಯ ನಿಯಮಗಳಲ್ಲಿ ವಿದ್ಯಾರ್ಥಿ ನಾಯಕರಿಗೆ ಯಾವುದೇ ರಿಯಾಯಿತಿಯಾಗಲೀ, ವಿನಾಯಿತಿಯಾಗಲೀ ಇರುವುದಿಲ್ಲ.

2. ನಿಯಮ ಅನುಸಾರ ಸಿಗಬೇಕಾದ ಸೌಕರ್ಯ, ಸೌಲಭ್ಯಗಳಲ್ಲಿ ಕೊರತೆಯಾದ ಸಂದರ್ಭಗಳಲ್ಲಿ ವೈಯಕ್ತಿಕವಾಗಿ ಪ್ರಾಂಶುಪಾಲರಿಗೆ ಮನವಿ ಸಲ್ಲಿಸಿ ಪರಿಹಾರ ಪಡೆಯಬಹುದು. ಪ್ರಾಂಶುಪಾಲರನ್ನು ಭೇಟಿಯಾಗುವ ಮುನ್ನಾ ವಿದ್ಯಾರ್ಥಿ ಸಂಘದ ಉಪ ನಿರ್ದೇಶಕರು / ವಿದ್ಯಾರ್ಥಿ ಕ್ಷೇಮ ಪಾಲಕರ ಜೊತೆ ಚರ್ಚಿಸುವುದು.

3. ವಿಶ್ವವಿದ್ಯಾನಿಲಯ ವಿಷಯಗಳಲ್ಲಿ ನಿಗದಿ ಪಡಿಸಿದ ದಿನಾಂಕ, ಶುಲ್ಕ ಇತ್ಯಾದಿ ನಿಯಮಗಳನ್ನು ಬದಲಾಯಿಸುವ ಬೇಡಿಕೆಗಳಿಗೆ ಅವಕಾಶವಿಲ್ಲ.

4. ಆಡಳಿತ, ಶಿಸ್ತು, ಪರೀಕ್ಷೆ ಇತ್ಯಾದಿ ವಿಷಯಗಳನ್ನು ಬಿಟ್ಟು ಇತರ ಮೂಲಭೂತ ಸೌಲಭ್ಯಗಳನ್ನು, ಸಮಸ್ಯೆಗಳು ಇತ್ಯಾದಿಗಳ ಕುರಿತಾಗಿ ಅಹವಾಲು ಸಲ್ಲಿಸಲು ವಿದ್ಯಾರ್ಥಿ ಮಾರ್ಗದರ್ಶಕರಾದ ಅಧ್ಯಾಪಕರು, ವಿಭಾಗ ಸಲಹೆಗಾರರು ಅಥವಾ ವಿದ್ಯಾರ್ಥಿ ಕ್ಷೇಮಪಾಲಕರ ಸಲಹೆ, ಮಾರ್ಗದರ್ಶನಗಳನ್ನು ಬಳಸಿಕೊಳ್ಳಬೇಕು.

**ಎಫ್. ಅಂತರ ಕಾಲೇಜು ಸ್ಪರ್ಧೆಗಳಿಗೆ ಕಾಲೇಜನ್ನು ಪ್ರತಿನಿಧಿಸುವವರ ಆಯ್ಕೆ ಕ್ರಮ:**

1. ವಿದ್ಯಾರ್ಥಿ ಸಂಘದ ಉದ್ಘಾಟನೆಯ ನಂತರ ಸ್ಪರ್ಧೆಗಳನ್ನು ಸೂಕ್ತವಾಗಿ ವಿಭಾಗಿಸಿ, ನಿಗದಿ ಪಡಿಸಿದ ಅಧ್ಯಾಪಕರು ಹಾಗೂ ಆಸಕ್ತರಾದ ವಿದ್ಯಾರ್ಥಿಗಳ ಸಮ್ಮುಖದಲ್ಲಿ ಬೇರೆ ಬೇರೆ ದಿನಗಳಲ್ಲಿ ನಿಗದಿತ ಸಮಯದಲ್ಲಿ ನಡೆಸಿ ಆಯ್ಕೆ ನಡೆಸಲಾಗುವುದು.

2. ಆಯ್ಕೆಯಾದವರಿಗೆ ಪ್ರಮಾಣ ಪತ್ರ ಹಾಗೂ ಬಹುಮಾನಗಳನ್ನು ವಾರ್ಷಿಕೋತ್ಸವ ಸಮಾರಂಭಗಳಲ್ಲಿ ವಿತರಿಸಲಾಗುವುದು.

3. ಆಯ್ಕೆಯಾದವರನ್ನು ಅಂತರ ಕಾಲೇಜು ಸ್ಪರ್ಧೆಗಳಿಗೆ ನಿಯಮಾನುಸಾರ ಕಳುಹಿಸಲಾಗುವುದು.

**ಜಿ. ವಿದ್ಯಾರ್ಥಿ ಸಂಘವನ್ನು ಪೂರ್ತಿಯಾಗಿ ಅಥವಾ ಯಾವನೇ/ಳೇ ಪದಾಧಿಕಾರಿ, ತರಗತಿ ಪ್ರತಿನಿಧಿಯ ಆಯ್ಕೆ ರದ್ದು ಪಡಿಸುವ ಮತ್ತು ಅನಂತರದ ಶಿಸ್ತು ಕ್ರಮ ತೆಗೆದುಕೊಳ್ಳಬಹುದಾದ ಬಗ್ಗೆ:**

1. ಯಾವುದೇ ನಿಯಮಗಳ ಉಲ್ಲಂಘನೆ ಕಂಡು ಬಂದಲ್ಲಿ ಅದಕ್ಕೆ ನೇರ ಜವಾಬ್ದಾರನೆಂದು ಕಂಡು ಬಂದ ಪದಾಧಿಕಾರಿ, ಪ್ರತಿನಿಧಿಯ ಆಯ್ಕೆಯನ್ನು ತತ್‌ಕ್ಷಣದಿಂದ ರದ್ದು ಪಡಿಸಲಾಗುತ್ತದೆ.

2. ಈ ರೀತಿಯ ಉಲ್ಲಂಘನೆಯು ವಿದ್ಯಾರ್ಥಿ ಸಂಘದ ಅಧ್ಯಕ್ಷ, ಕಾರ್ಯದರ್ಶಿ, ಸಹ ಕಾರ್ಯದರ್ಶಿನಿ, ಲಲಿತ ಕಲಾ ಸಂಘದ ಕಾರ್ಯದರ್ಶಿನಿ ಹಾಗೂ ಸಹ ಕಾರ್ಯದರ್ಶಿನಿ - ಇವರ ಸಹಭಾಗಿತ್ವ, ಬೆಂಬಲದಿಂದ ನಡೆದಲ್ಲಿ ಸೂಕ್ತ ವಿಚಾರಣೆಯೊಂದಿಗೆ ವಿದ್ಯಾರ್ಥಿ ಸಂಘವನ್ನು ಪೂರ್ತಿಯಾಗಿ ರದ್ದು ಪಡಿಸಬಹುದಾಗಿದೆ.

**ಡಾ. ಅನಸೂಯ ರೈ,**

ಪ್ರಾಂಶುಪಾಲರು